# ಮಲ್ಯ ಬರುವುದು ಯಾವಾಗ?



ಉದ್ಯಮಿ ವಿಜಯ್ ಮಲ್ಯ ಅವರನ್ನು ಇಂಗ್ಲೆಂಡಿನಿಂದ ಭಾರತಕ್ಕೆ ಗಡೀಪಾರು ಮಾಡಲು ಬ್ರಿಟನ್ ಸರ್ಕಾರವು ನಿರ್ಧರಿಸಿದೆ. ಅಲ್ಲಿನ ಗೃಹ ಕಾರ್ಯದರ್ಶಿ, ಪಾಕಿಸ್ತಾನ ಮೂಲದ ಸಾಜಿದ್ ಜಾವಿದ್ ಗಡೀಪಾರು ಆದೇಶಕ್ಕೆ ಕಳೆದ ವಾರ ಸಹಿ ಹಾಕಿದ್ದಾರೆ. ಇನ್ನೀಗ ಉಳಿದಿರುವ ಪ್ರಶ್ನೆ– ವಿಜಯ್ ಮಲ್ಯ ಭಾರತಕ್ಕೆ ಬರುವುದು ಯಾವಾಗ?

ಉತ್ತರ ಅಷ್ಟು ಸುಲಭವಲ್ಲ. ಲಂಡನ್ನಿನ ವೆಸ್ಟ್‌ಮಿನಿಸ್ಟರ್ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ನ್ಯಾಯಾಧೀಶರು ತನಿಖೆ ನಡೆಸಿ, ಮಲ್ಯ ಅವರನ್ನು ಭಾರತಕ್ಕೆ ಗಡೀಪಾರು ಮಾಡಬಹುದು ಎಂದು ತೀರ್ಪಿತ್ತದ್ದು ಕಳೆದ ವರ್ಷದ ಡಿಸೆಂಬರ್ 10ರಂದು. ಕೋರ್ಟಿನ ಆ ಆದೇಶವನ್ನು ಜಾರಿಗೆ ತರಲು ಬ್ರಿಟನ್ ಸರ್ಕಾರಕ್ಕೆ ಎರಡು ತಿಂಗಳ ಅವಧಿ ಇತ್ತು. ಎರಡು ತಿಂಗಳು ಮುಗಿಯುವುದಕ್ಕೆ ಒಂದು ವಾರ ಮೊದಲೇ ಬ್ರಿಟನ್ ಸರ್ಕಾರ ನಿರ್ಧಾರ ಪ್ರಕಟಿಸಿದೆ. ಆದರೆ ಅಷ್ಟು ಮಾತ್ರಕ್ಕೆ ಮಲ್ಯ ಅವರನ್ನು ಭಾರತಕ್ಕೆ ಕರೆತರಲು ಆಗುವುದಿಲ್ಲ. ಸರ್ಕಾರದ ಈ ಆದೇಶದ ವಿರುದ್ಧ ಮಲ್ಯ ಬ್ರಿಟನ್ನಿನ ಹೈಕೋರ್ಟಿಗೆ ಅಪೀಲು ಅರ್ಜಿ ಸಲ್ಲಿಸಬಹುದು. ಅದಕ್ಕೆ 14 ದಿನಗಳ ಕಾಲಾವಕಾಶವಿದ್ದು, ಅವರ ವಕೀಲರು ಅಪೀಲು ಅರ್ಜಿಯನ್ನು ಸಿದ್ಧಗೊಳಿಸುತ್ತಿದ್ದಾರೆ. ಅಲ್ಲಿನ ಹೈಕೋರ್ಟ್‌ನಲ್ಲಿ ಈ ವಿಚಾರಣೆ ಎಷ್ಟು ತಿಂಗಳ ಕಾಲ ನಡೆಯಬಹುದು ಎನ್ನುವುದು ಗೊತ್ತಿಲ್ಲ.

63ರ ಹರೆಯದ ವಿಜಯ್ ಮಲ್ಯ ಭಾರತೀಯ ಉದ್ಯಮ ಕಂಡ ವರ್ಣರಂಜಿತ ವ್ಯಕ್ತಿ. ಅವರು ಭಾರತದಿಂದ ಪಲಾಯನ ಮಾಡಿ ಈ ಮಾರ್ಚ್ 9ಕ್ಕೆ ಮೂರು ವರ್ಷ ತುಂಬುತ್ತದೆ. ಕಳೆದ ಮೂರು ವರ್ಷಗಳಿಂದಲೂ ಅವರನ್ನು ಭಾರತಕ್ಕೆ ವಾಪಸ್ ಕರೆತರಲು ಸರ್ಕಾರ ಕಾನೂನು ಹೋರಾಟ ನಡೆಸುತ್ತಿದೆ. ಎಲ್ಲ ಶುರುವಾದದ್ದು ಮಲ್ಯ ಅವರು ಕಿಂಗ್‌ಫಿಶರ್ ಎನ್ನುವ ಹೊಸ ಏರ್‌ಲೈನ್ಸ್ ಕಂಪನಿಯನ್ನು ಆರಂಭಿಸುವುದರೊಂದಿಗೆ. 2005ರ ಮೇ ತಿಂಗಳಲ್ಲಿ ಮಲ್ಯ, ತಮ್ಮ ಕಿಂಗ್‌ಫಿಶರ್ ಏರ್‌ಲೈನ್ಸ್‌ನ ಘೋಷಣೆಯನ್ನು ಮಾಡಿದಾಗ, ಮದ್ಯ ಉದ್ಯಮದಲ್ಲಿ ಯಶಸ್ಸಿನ ತುತ್ತತುದಿಗೇರಿದ್ದರು. ಯುನೈಟೆಡ್ ಬ್ರೂವರೀಸ್ ಕಂಪನಿಯ ಉತ್ಪನ್ನಗಳು ವಿದೇಶಗಳಲ್ಲೂ ಹೆಸರುವಾಸಿಯಾಗಿದ್ದವು.

ವಿಮಾನ ಕಂಪನಿಯ ಉದ್ಯಮ, ಮದ್ಯ ಉದ್ಯಮದಷ್ಟು ಸುಲಭವಲ್ಲ ಎನ್ನುವುದು ವಿಜಯ್ ಮಲ್ಯ ಅವರಿಗೆ ಆರಂಭದಲ್ಲೇ ಗೊತ್ತಾಗಬೇಕಿತ್ತು. ವಿಮಾನಯಾನ ಕಂಪನಿಯನ್ನು ಆರಂಭಿಸಿದ್ದೇ ಯುಬಿ ಕಂಪನಿಯ ಲಾಭದ ಬಲದ ಮೇಲೆ. ಬ್ಯಾಂಕ್‌ಗಳಿಂದ ಸಾವಿರಾರು ಕೋಟಿ ರೂಪಾಯಿ ಸಾಲ ಪಡೆಯುವಾಗ ಯುಬಿ ಕಂಪನಿಯ ಆಸ್ತಿಗಳನ್ನೇ ಅಡವಿಡಲಾಗಿತ್ತು.

2008 ನಷ್ಟದಲ್ಲಿದ್ದ ಏರ್‌ಡೆಕ್ಕನ್ ಕಂಪನಿಯ 550 ಕೋಟಿ ರೂಪಾಯಿ ಮೌಲ್ಯದ ಶೇ 26ರಷ್ಟು ಷೇರುಗಳನ್ನು ಕಿಂಗ್‌ಫಿಶರ್ ಖರೀದಿಸಿತು. ಅದ್ದೂರಿಯ ಸೌಲಭ್ಯಗಳನ್ನು ಕಲ್ಪಿಸಿದ ಕಿಂಗ್‌ಫಿಶರ್, ಅಲ್ಲಿಂದಲೇ ನಷ್ಟದ ಪ್ರಮಾಣ ಹೆಚ್ಚಿಸುತ್ತಾ ಹೋಯಿತು. 2009ರಲ್ಲಿ ಕಂಪನಿಗೆ ಇದ್ದ 7000 ಕೋಟಿ ರೂಪಾಯಿಯ ನಷ್ಟ, 2013ರಲ್ಲಿ 13,000 ಕೋಟಿಗೆ ಏರಿತು. ಈ ಮಧ್ಯೆ ಬ್ಯಾಂಕ್‌ಗಳು ಸಾಲಮರುಪಾವತಿಗಾಗಿ ಮುಗಿಬಿದ್ದವು. ಕೆಲವರು ಕೋರ್ಟ್ ಮೆಟ್ಟಿಲು ಹತ್ತಿ, ಆಸ್ತಿ ಮುಟ್ಟುಗೋಲಿಗೆ ಯತ್ನಿಸಿದರು. ಆಗ ಕೆಲವು ಆಸ್ತಿಗಳನ್ನು ಎರಡೆರಡು ಬ್ಯಾಂಕ್‌ಗಳ ಸಾಲಕ್ಕೆ ಅಡವಿಟ್ಟದ್ದು ಬೆಳಕಿಗೆ ಬಂತು. ವಿಮಾನ ಕಂಪನಿಯ ಲೋಗೊ ಮತ್ತು ಕಚೇರಿ ಸಲಕರಣೆಗಳ ಮೌಲ್ಯವನ್ನೂ ಕೋಟ್ಯಂತರ ರೂಪಾಯಿ ಹಿಗ್ಗಿಸಿ ಸಾಲ ಪಡೆದದ್ದು ಬಹಿರಂಗವಾಯಿತು.

ಪರಾರಿಯಾಗುವ ಆರ್ಥಿಕ ಅಪರಾಧಿಗಳನ್ನು ತರಲು ನಮ್ಮ ಕಾನೂನುಗಳಿಗೆ ಸೂಕ್ತ ಹಲ್ಲುಗಳಿರಲಿಲ್ಲ. ಕಳೆದ ವರ್ಷದ ಕೊನೆಗೆ ಸರ್ಕಾರ ಜಾರಿಗೆ ತಂದ 'ಪರಾರಿಯಾದ ಆರ್ಥಿಕ ಅಪರಾಧಿಗಳ ಕಾಯ್ದೆ 2018' ಮಲ್ಯ ಬಂಧನಕ್ಕೆ ಸೂಕ್ತ ಕಾನೂನು ಚೌಕಟ್ಟನ್ನು ಒದಗಿಸಿತು. ಈ ಕಾಯ್ದೆ ಜಾರಿಗೆ ಬಂದ ನಂತರ 'ಪರಾರಿಯಾದ ಆರ್ಥಿಕ ಅಪರಾಧಿ' ಎಂದು ಘೋಷಣೆಯಾದ ಮೊದಲ ವ್ಯಕ್ತಿ ವಿಜಯ್ ಮಲ್ಯ.

ಬ್ಯಾಂಕ್‌ಗಳಿಗೆ 13,000 ಕೋಟಿ ರೂಪಾಯಿಗಳಷ್ಟು ಭಾರಿ ಮೊತ್ತದ ಸಾಲ ಉಳಿಸಿ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎನ್ನುವುದು ಯಶಸ್ವಿ ಉದ್ಯಮಿಯೊಬ್ಬರಿಗೆ ಗೊತ್ತಿರಲಿಲ್ಲವೆ? ಗೊತ್ತಿದ್ದೇ ಒಂದು ಹಂತದಲ್ಲಿ 4000 ಕೋಟಿ ರೂಪಾಯಿಗಳನ್ನು ತಕ್ಷಣ ಮರುಪಾವತಿ ಮಾಡುವುದಾಗಿ ಮಲ್ಯ ಹೇಳಿದ್ದರು. ಆದರೆ ಅದಾಗಲೇ ಆಸ್ತಿ ಮುಟ್ಟುಗೋಲಿಗೆ ಕ್ರಮ ಕೈಗೊಂಡಿದ್ದ ಬ್ಯಾಂಕ್‌ಗಳು ಒಪ್ಪಲಿಲ್ಲ. ಲಂಡನ್ನಿಗೆ ಪರಾರಿಯಾದ ಬಳಿಕ ಒಂದು ವರ್ಷ ಮಲ್ಯ ಅಲ್ಲೇ ಬಹಿರಂಗವಾಗಿ ಓಡಾಡಿಕೊಂಡಿದ್ದರು. ಆದರೆ ಭಾರತ ಸರ್ಕಾರದ ಗಡೀಪಾರು ಮನವಿಯ ಮೇರೆಗೆ ಅಲ್ಲಿನ ಕೋರ್ಟ್ ಮೊದಲ ಬಾರಿಗೆ ಬಂಧಿಸಿದ ಬಳಿಕ ಮಲ್ಯರಿಗೆ ಭಾರತಕ್ಕೆ ವಾಪಸಾಗುವುದನ್ನು ತಪ್ಪಿಸಲು ಸಾಧ್ಯವಿಲ್ಲ ಎನ್ನುವುದರ ಅರಿವಾಯಿತು. ಈ ಪ್ರಕ್ರಿಯೆಯನ್ನು ಮೂಲಕ ಮುಂದೂಡುವ ಸಾಹಸ ಮಾತ್ರ ಈಗ ನಡೆದಿದೆ.

ಈ ಮಧ್ಯೆ ಕೋರ್ಟ್ ಪ್ರಕ್ರಿಯೆಯಿಂದ ತಪ್ಪಿಸಿಕೊಳ್ಳಲು, ಕಳೆದ ವರ್ಷ ಡಿಸೆಂಬರ್‌ನಲ್ಲಿ ಮಲ್ಯ ಅವರು ಬ್ಯಾಂಕ್ ಸಾಲದ ಪೂರ್ಣ ಅಸಲು ಹಣವನ್ನು ಕೊಡುವುದಾಗಿ ಪ್ರಕಟಿಸಿದ್ದರು. ಬ್ಯಾಂಕ್‌ಗಳು ಒಪ್ಪಿಕೊಳ್ಳಲಿಲ್ಲ. ಭಾರತಕ್ಕೆ ಬಂದರೆ ಮುಂಬೈಯ ಆರ್ಥರ್ ಜೈಲಿನಲ್ಲಿ ಮಲ್ಯ ಅವರನ್ನು ಬಂಧನದಲ್ಲಿ ಇಡಬಹುದು ಎನ್ನುವ ವಿಷಯವೂ ಅಲ್ಲಿನ ಕೋರ್ಟ್‌ನಲ್ಲಿ ಚರ್ಚೆಗೆ ಬಂದಿತ್ತು. ವಿಡಿಯೊ ಮೂಲಕ ಆರ್ಥರ್ ಜೈಲಿನ ವ್ಯವಸ್ಥೆಗಳನ್ನು ನೋಡಿ ಮಲ್ಯ ಅವರೂ ವ್ಯವಸ್ಥೆ ಚೆನ್ನಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದರು! ಹಾಗಿದ್ದೂ ಮಲ್ಯ ಅವರು ಈ ವರ್ಷದಲ್ಲಿ ಭಾರತಕ್ಕೆ ಗಡೀಪಾರಾಗಿ ಬರುವ ಸಾಧ್ಯತೆಯಿಲ್ಲ ಎನ್ನಲಾಗುತ್ತಿದೆ.

■ **ಹನಿ**

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65